

## ಬಯಕೆಯ ಅಸಮತೋಲನ

ಅಮೆರಿಕಾದ ಸುಪ್ರಸಿದ್ಧ ಲೈಂಗಿಕ ಮತ್ತು ದಾಂಪತ್ಯ ಮನೋಚಿಕಿತ್ಸಕ ಡೇವಿಡ್ ಶ್ನಾರ್ಕ್ ಹೇಳುವಂತೆ ದಂಪತಿಗಳಲ್ಲಿ ಲೈಂಗಿಕ ಆಸಕ್ತಿ ಮತ್ತು ಬಯಕೆಯ ಅಸಮತೋಲನ ಇರುವುದು ಸಹಜ. ಇಬ್ಬರು ವ್ಯಕ್ತಿಗಳಲ್ಲಿ ಊಟ, ಉಡುಗೆತೊಡುಗೆ ಇತರ ಹವ್ಯಾಸಗಳುಹೀಗೆ ಎಲ್ಲಾ ವಿಚಾರಗಳಲ್ಲಿ ಬಯಕೆಯ ಮಟ್ಟ ಹೆಚ್ಚುಕಡಿಮೆಯಾಗಿರುವುದು ಸಹಜವಾಗಿರುವಾಗ ಕಾಮಕೂಟದ ಆಸಕ್ತಿ ಮಾತ್ರ ಒಂದೇ ಮಟ್ಟದಲ್ಲಿ ಮತ್ತು ಮಾದರಿಯಲ್ಲಿರಬೇಕೆಂದು ಹೇಗೆ ನಿರೀಕ್ಷಿಸುತ್ತೀರಿ? ದಂಪತಿಗಳಲ್ಲಿ ಒಬ್ಬರು ಹೆಚ್ಚಿನ ಬಯಕೆಯುಳ್ಳವರು (ತಮಾಷೆಯಾಗಿ ಇವರನ್ನು ತೀವ್ರಗಾಮಿ ಎಂದು ಕರೆಯೋಣ) ಮತ್ತೊಬ್ಬರು ಕಡಿಮೆ ಬಯಕೆಯುಳ್ಳವರೂ (ಸೌಮ್ಯಗಾಮಿ) ಆಗಿದ್ದಾಗ ಭಿನ್ನಾಭಿಪ್ರಾಯಗಳು ಬರುವುದು ಸಹಜವೇ. ಪುರುಷರು ತೀವ್ರಗಾಮಿಗಳು ಮತ್ತು ಸ್ತ್ರೀಯರು ಸೌಮ್ಯಗಾಮಿಗಳು ಎನ್ನುವುದು ಹೆಚ್ಚಿನವರ ತಿಳಿವಳಿಕೆ. ಸ್ತ್ರೀಯರಲ್ಲೂ ತೀವ್ರಗಾಮಿಗಳಿರುತ್ತಾರೆ. ಆದರೆ ಸಾವಿರಾರು ವರ್ಷಗಳಿಂದ ತಮ್ಮ ಲೈಂಗಿಕತೆಯನ್ನು ಹತ್ತಿಕ್ಕಿಕೊಂಡು ಬದುಕುತ್ತಾ ಬಂದಿರುವ ಅವರು ಬಯಕೆಯ್ನು ತೋರಿಸಿಕೊಳ್ಳುವುದು ಅವಮಾನಕರ ಎಂದುಕೊಂಡಿರುತ್ತಾರೆ. ಹಾಗಾಗಿ ಎಷ್ಟೋ ಮಹಿಳೆಯರು ಸೌಮ್ಯಗಾಮಿಯ ಮುಖವಾಡದೊಳಗೆ ಕೊರಗುತ್ತಿರುತ್ತಾರೆ. ಈ ವಿಚಾರದಲ್ಲಿ ಸ್ತ್ರೀಪುರುಷರಲ್ಲಿನ ಒಂದೇ ವ್ಯತ್ಯಾಸವೆಂದರೆ ಆಸಕ್ತಿಯ ಕೊರತೆ ಇದ್ದಾಗ ಪುರುಷರು ಕೂಟದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಸ್ತ್ರೀಯರು ತಮ್ಮ ಇಷ್ಟಕ್ಕೆ ವಿರುದ್ಧವಾಗಿಯೂ ಲೈಂಗಿಕಕ್ರಿಯೆಯಲ್ಲಿ ಪಾಲುಗೊಳ್ಳಲು ಸಾಧ್ಯ. ಪತಿಯನ್ನು ಪ್ರಾಮಾಣಿಕವಾಗಿ ಪ್ರೀತಿಸುವ ಪತ್ನಿಯರು ಇಷ್ಟವಿಲ್ಲದೆ ಬೆರೆತಾಗ ಪತಿಗೆ ಬೇಸರವಾಗಬಾರದೆಂದು ತಾವೂ ಆನಂದಪಡುತ್ತಿರುವಂತೆ ನಟನೆ ಮಾಡುವುದೂ ವಿಶೇಷವೇನಲ್ಲ.

**ಹೆಚ್ಚು ಬಯಕೆ ಉಳ್ಳವರು ಸಂಗಾತಿಯ ತಿರಸ್ಕಾರದ ನಿರೀಕ್ಷೆಯಲ್ಲಿ ತಮ್ಮ ಬಯಕೆಯನ್ನು ವ್ಯಕ್ತಪಡಿಸುವುದಿಲ್ಲ ಅಥವಾ ಹಿಂಜರಿಕೆಯಿಂದಲೇ ವ್ಯಕ್ತಪಡಿಸುತ್ತಾರೆ.**

ಡೇವಿಡ್ ಶ್ನಾರ್ಕ್ ಹೇಳುವಂತೆ ಕೂಟಕ್ಕೆ ತೀವ್ರಗಾಮಿಗಳ ಆಹ್ವಾನವನ್ನು ಸ್ವೀಕರಿಸುವುದು ಮತ್ತು ಅದಕ್ಕೆ ಸ್ಪಂದಿಸುವುದು ಸೌಮ್ಯಗಾಮಿಗಳ ಹಿಡಿತದಲ್ಲಿರುತ್ತದೆ. ಹಾಗಾಗಿ ಸೌಮ್ಯಗಾಮಿಗಳು ದಂಪತಿಗಳ ನಡುವಿನ ಲೈಂಗಿಕ ಸಂಪರ್ಕವನ್ನು ಹಿಡಿತದಲ್ಲಿಟ್ಟುಕೊಂಡಿರುತ್ತಾರೆ. ಇದು ವಿಚಿತ್ರ ಪರಿಸ್ಥಿತಿಯನ್ನು ಸೃಷ್ಟಿಮಾಡುತ್ತದೆ. ಇಬ್ಬರಿಗೂ ತಮ್ಮ ಅತೃಪ್ತಿಗೆ ಸಂಗಾತಿಯೇ ಕಾರಣ. ಅವರು ಸರಿಯಾದರೆ ತಮ್ಮ ಸಂಬಂಧ ಸರಿಹೋಗುತ್ತದೆ ಎನ್ನಿಸುತ್ತದೆ. ತೀವ್ರಗಾಮಿಗಳಿಗೆ ತಮ್ಮನ್ನು ಯಾವಾಗಲೂ ಕಡೆಗಣಿಸಲಾಗುತ್ತಿದೆ, ತಿರಸ್ಕರಿಸಲಾಗುತ್ತಿದೆ, ಲೈಂಗಿಕ ಸಂಪರ್ಕವನ್ನು ತಡೆಹಿಡಿಯುವುದರ ಮೂಲಕ ತಮ್ಮನ್ನು ಹಿಡಿತದಲ್ಲಿಡಲಾಗುತ್ತಿದೆ ಎನ್ನುವ ಭಾವನೆಗಳು ಮೂಡುತ್ತದೆ. ಸೌಮ್ಯಗಾಮಿಗಳಿಗೆ ತಮ್ಮ ಉಪಯುಕ್ತತೆ ಕೇವಲ ಸಂಗಾತಿಯ ಲೈಂಗಿಕ ಹಸಿವನ್ನು ತೀರಿಸುವುದಕ್ಕೆ ಮಾತ್ರ, ಇದಕ್ಕಾಗಿ ತಮ್ಮ ಮೇಲೆ ನಿಂರತರ ಒತ್ತಡ ಹೇರಲಾಗುತ್ತಿದೆ ಎನ್ನುವ ಭಾವನೆಗಳು ಬರಬಹುದು. ಹೀಗಾದಾಗ ಗಂಡಹೆಂಡಿರ ಜಗಳಗಳು ಬೆಡ್‌ರೂಮ್‌ನ್ನು ದಾಟಿ ಮನೆ ಮತ್ತು ಮನದತುಂಬಾ ಹರಡಿಕೊಳ್ಳುತ್ತವೆ.

ತೀವ್ರಗಾಮಿಗಳು ಸಂಗಾತಿಯ ತಿರಸ್ಕಾರದ ನಿರೀಕ್ಷೆಯಲ್ಲಿ ತಮ್ಮ ಬಯಕೆಯನ್ನು ವ್ಯಕ್ತಪಡಿಸುವುದಿಲ್ಲ ಅಥವಾ ಹಿಂಜರಿಕೆಯಿಂದಲೇ ವ್ಯಕ್ತಪಡಿಸುತ್ತಾರೆ. ಸೌಮ್ಯಗಾಮಿಗಳಿಗೆ ಸಂಗಾತಿಯಿಂದ ಯಾವಾಗ ಬೇಕಾದರೂ ಆಹ್ವಾನ ಬರಬಹುದು ಎನ್ನುವ ನಿರೀಕ್ಷೆಯಲ್ಲಿ ನಿರಂತರ ಆತಂಕವೇ ತುಂಬಿಕೊಂಡಿರುತ್ತದೆ. ಇದರಿಂದ ದಂಪತಿಗಳ ನಡುವೆ ಕೃತಕವಾದ ಗೋಡೆಯೊಂದು ಸೃಷ್ಟಿಯಾಗುತ್ತದೆ.

ಉದಾಹರಣೆಗೆ ಮಧ್ಯವಯಸ್ಸಿನ ಒಂದು ಜೋಡಿಯಲ್ಲಿ ಪತಿಗೆ